# ಕರಾವಳಿ ಪರಿಸರದ ಆಧುನಿಕ ಸಾಹಿತ್ಯದಲ್ಲಿ ದಲಿತರ ಬದುಕಿನ ತಲ್ಲಣಗಳು

**ಸುಧೀಶ್**

ಸಂಶೋಧನಾರ್ಥಿ, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾಲಯ, ತುಮಕೂರು

**DOI: https://doi.org/10.5281/zenodo.17255021**

## ABSTRACT:

ದಲಿತ ಸಾಹಿತ್ಯದ ಹಿನ್ನೆಲೆಯೊಂದಿಗೆ, ಕರಾವಳಿ ಪರಿಸರದ ಆಧುನಿಕ ದಲಿತ ಸಾಹಿತ್ಯದ ವಿಶೇಷತೆಗಳನ್ನು ತಿಳಿಸುವುದರೊಂದಿಗೆ, ದಲಿತರ ಬದುಕಿನ ತಲ್ಲಣಗಳನ್ನು ವಿವರಿಸುವ ಉದ್ದೇಶವು ಈ ಪ್ರಬಂಧಕ್ಕಿದೆ. ಕರಾವಳಿ ಲೇಖಕರ ಶಿಕ್ಷಣದ ಹಿನ್ನೆಲೆ, ಭಾಷಾ ಸಂದಿಗ್ಧತೆಗಳು, ಜೊತೆಗೆ ಸಾಂಸ್ಕೃತಿಕ ಭಿನ್ನತೆಗಳ ಕಿರು ಚರ್ಚೆಯನ್ನು ನಡೆಸಲಾಗಿದೆ. ಪ್ರಸಿದ್ಧ ಗದ್ಯ, ಪದ್ಯ ಕಥೆಗಾರರು, ಕವಿಗಳ ಮೂಲಕ ದಲಿತ ಲೇಖಕರ ಸಾಹಿತ್ಯದ ಪರಿಚಯವನ್ನು ಮಾಡಲಾಗಿದೆ. ಇಲ್ಲಿ ಪ್ರಧಾನವಾಗಿ ಜನಾರ್ಧನ ಎರ್ಪಕಟ್ಟೆಯವರ 'ಎರ್ಪಕಟ್ಟೆ ಕಥೆಗಳು', ಸುರೇಶ್ ಮರಿಣಾಪುರರ 'ಚಿಂಬುರಿ' ಕಾದಂಬರಿ, ರಾಧಾಕೃಷ್ಣ ಉಳಿಯತ್ತಡ್ಕರವರ ಕವಿತೆಗಳು, ಸುರೇಶ್‌ರವರ ಕವಿತೆಗಳು, ಪದ್ಮಾವತಿ ಏದಾರ್ ಮೊದಲಾದವರ ಕವನ ಸಂಕಲನದ ವಸ್ತುವಿಷಯವನ್ನು ಚರ್ಚೆಮಾಡಲಾಗಿದೆ. ಮುಖ್ಯವಾಗಿ ಪ್ರಕೃತ ಕಾಲದ ಕರಾವಳಿ ದಲಿತ ಯುವ ಬರಹಗಾರರ ಬದುಕಿನ ತಲ್ಲಣಗಳನ್ನು ಅವರ ಸಾಹಿತ್ಯದ ವಸ್ತುವಿಷಯದ ದೃಷ್ಟಿಯಿಂದ ಅಭ್ಯಸಿಸಲಾಗಿದೆ. ಬಹಳ ಮುಖ್ಯವಾಗಿ ಕರಾವಳಿಯ ದಲಿತ ಸಾಹಿತಿಗಳ ಬರಹಗಳ ವೈಶಿಷ್ಟ್ಯತೆಯನ್ನು, ಭಾಷಾ ಸೊಗಡನ್ನು ಕುರಿತು ಅವರ ಬರಹಗಳ ಉದಾಹರಣೆಯೊಂದಿಗೆ ವಿಶ್ಲೇಷಣೆ ಮಾಡಲಾಗಿದೆ.

## KEYWORDS:

ದಲಿತ ಪ್ರಜ್ಞೆ, ದಲಿತ ಸಾಹಿತ್ಯ, ಅಸ್ಪೃಶ್ಯತೆ, ಸೃಜನಶೀಲ ಸಾಹಿತ್ಯ, ಶೋಷಣೆ, ದಲಿತ ಸಂವೇದನೆ.

ಒಂದೂವರೆ ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿರುವಂತಹ ಕನ್ನಡ ಸಾಹಿತ್ಯವು ಪ್ರಾಚೀನ ಕನ್ನಡ, ಮಧ್ಯಕಾಲೀನ ಕನ್ನಡ, ಹೊಸಗನ್ನಡ ಎಂಬ ಕಾಲಘಟ್ಟವಾಗಿ ರೂಪಿತಗೊಂಡು ಆಧುನಿಕ ಸಾಹಿತ್ಯದ ವಿವಿಧ ಮಜಲುಗಳಾಗಿ ನವೋದಯ, ಪ್ರಗತಿಶೀಲ, ನವ್ಯ, ದಲಿತಬಂಡಾಯಗಳೆಂಬ ಹಂತಗಳಾಗಿ ಕಂಡುಬರುತ್ತದೆ. ಹೀಗೆ ಆಯಾ ಕಾಲಘಟ್ಟಗಳ ಸಮಾಜ, ಸಂಸ್ಕೃತಿ, ಭಾಷೆ, ಪರಿಸರವು ಸಾಹಿತ್ಯದ ಹುಟ್ಟಿಗೆ ಕಾರಣವೂ ಜೊತೆಗೆ ವಿಭಿನ್ನತೆಗಳಿಗೂ ಕಾರಣವಾಗಿದೆ. ಈ ಹಂತಗಳ ನಡುವಿನ ವ್ಯತ್ಯಾಸಗಳನ್ನು ಅವಲೋಕಿಸಿಕೊಂಡು ಸಾಹಿತ್ಯದ ಬೆಳವಣಿಗೆಯನ್ನು, ತಲ್ಲಣಗಳನ್ನು ಅಧ್ಯಯನ ಮಾಡಲಾಗುತ್ತದೆ.

ಬದುಕು ಹಾಗು ಸಾಹಿತ್ಯ ಒಂದಕ್ಕೊಂದು ಪೂರಕವಾದಂತಹ ಪರಿಕಲ್ಪನೆಯಾಗಿದೆ. ಬದುಕಿನ ಆಗುಹೋಗುಗಳನ್ನು, ಲೌಕಿಕ ವಿಚಾರಗಳನ್ನು, ಸಂಕಷ್ಟ ಬವಣೆಗಳನ್ನು ಹೀಗೆ ವಿವಿಧ ಬಗೆಯ ಮುಖಗಳನ್ನು ಸಾಹಿತ್ಯವು ವಿವಿಧ ಪ್ರಕಾರಗಳಲ್ಲಿ ಕಟ್ಟಿಕೊಡುತ್ತದೆ. "ಶೋಷಿತರಲ್ಲಿ ನೊಂದವರಲ್ಲಿ ಮತ್ತೂ ಹುಡುಕಾಟ ನಡೆಸಿದಾಗ ಕಂಡುಬರುವ, ತಮ್ಮ ನೋವನ್ನು ಹೇಳಲಾಗದೆ ಉಳಿದ ಸಮಾಜದ ಅತ್ಯಂತ ಕೆಳಸ್ತರದ ಜನಾಂಗಗಳ ನೋವಿನ ಧ್ವನಿಯಾಗಿ ಹುಟ್ಟಿಕೊಂಡದ್ದು ದಲಿತ ಸಾಹಿತ್ಯ."[1] ದಲಿತೇತರ ಸಾಹಿತಿಗಳು ದಲಿತರ ಬದುಕಿನ ಚಿತ್ರಣವನ್ನು ತಾವು ಸೃಷ್ಟಿಸುವುದು ದಲಿತ ಸಾಹಿತ್ಯವಾಗಿ ಗುರುತಿಸಿಕೊಂಡರೂ ದಲಿತರು ದಲಿತಾನುಭವದಿಂದ, ದಲಿತಪ್ರಜ್ಞೆಯಿಂದ, ದಲಿತರ ಬಗೆಗೆ ಬರೆದ ಸಾಹಿತ್ಯವು 'ದಲಿತ ಸಾಹಿತ್ಯ'ವಾಗಿ ಕಂಡುಬರುತ್ತದೆ. ಇದುವರೆಗಿನ ದಲಿತ ಸಾಹಿತ್ಯವನ್ನು ಗಮನಿಸಿದಾಗ ಅವುಗಳಿಗೆ ಸಂಬಂಧಿಸಿದ ವಿಮರ್ಶೆಗಳನ್ನು ಗಮನಿಸಿದಾಗ ಹೆಚ್ಚಾಗಿ ಕರ್ನಾಟಕದ ಉತ್ತರ ಹಾಗೂ ಮಧ್ಯಭಾಗದ ಲೇಖಕ ಹಾಗೂ ಲೇಖಕಿಯರು ತಮ್ಮ ಬಂಡಾಯ ಧೋರಣೆಗಳನ್ನು ತಮ್ಮ ಬಡತನ, ನೋವು, ಅಸಹಾಯಕತೆ, ಪ್ರತಿಭಟನೆ ಮೊದಲಾದವುಗಳನ್ನು ದಾಖಲಿಸಿದ್ದಾರೆ.

ಜಾತಿಯಿಂದ ಜಾತಿಗೆ, ಪ್ರದೇಶದಿಂದ ಪ್ರದೇಶಕ್ಕೆ ಸಂಸ್ಕೃತಿಯಲ್ಲಿ ಬದಲಾವಣೆಯನ್ನು ಕಾಣಬಹುದು. ಎಲ್ಲ ಜನಾಂಗಗಳಂತೆ ದಲಿತ ಜನಾಂಗಕ್ಕೂ ಅವರದೇ ಆದಂತಹ ಅರ್ಥಪೂರ್ಣವಾದ ಬದುಕಿದೆ. ಈ ಹಿನ್ನೆಲೆಯೊಂದಿಗೆ ಕರಾವಳಿ ಪರಿಸರದಲ್ಲಿ ಆಧುನಿಕ ಸಾಹಿತ್ಯ ಪ್ರಖರವಾಗಿ ಕಂಡುಬಂದಿದ್ದರೂ, ದಲಿತ ಲೇಖಕರಿಗಿಂತ ಹೆಚ್ಚಾಗಿ ದಲಿತೇತರ ಸಾಹಿತಿಗಳು ಅವರ ನೋವುನಲಿವು ಬದುಕಿನ ಚಿತ್ರಣಗಳನ್ನು ಅನಾವರಣಗೊಳಿಸುತ್ತಾ ಬಂದಿದ್ದಾರೆ. ಡಾ. ಶಿವರಾಮ ಕಾರಂತರ 'ಚೋಮನ ದುಡಿ' ಮತ್ತು 'ಕುಡಿಯರ ಕೂಸು', ಕುವೆಂಪುರವರ 'ಮಲೆಗಳಲ್ಲಿ ಮದುಮಗಳು', ಅನಂತಮೂರ್ತಿಯವರ 'ಭಾರತೀಪುರ', ಗೋವಿಂದ ಪೈಯವರ 'ಹೊಲೆಯನು ಯಾರು?', ವೀರಪ್ಪ ಮೊಯ್ಲಿಯವರ 'ತೆಂಬರೆ', ವೈದೇಹಿಯವರ

'ಅಸ್ಪೃಶ್ಯರು' ಹೀಗೆ ಉಲ್ಲೇಖಿಸಬಹುದಾಗಿದೆ.

ಪ್ರಾದೇಶಿಕ ಪರಿಮಿತಿಯೊಳಗೆ ದಲಿತ ಜನಾಂಗಗಳ ವಿವಿಧ ಪಂಗಡಗಳ ಜೀವನ, ರೀತಿ, ನಂಬಿಕೆ, ಆಚರಣೆಗಳು, ಸಂಪ್ರದಾಯಗಳು ವೈವಿಧ್ಯಮಯವಾಗಿರುತ್ತವೆ. ಕರಾವಳಿಯ ದಕ್ಷಿಣ ಕನ್ನಡ, ಕಾಸರಗೋಡು, ಉಡುಪಿ ಭಾಗಗಳಲ್ಲಿ ದಲಿತರು ಮಾತೃಭಾಷೆಯಾಗಿ ತುಳುವನ್ನು ಮಾತನಾಡುತ್ತಾರೆ. ಅವರಿಗೆ ದೊರೆತ ಶಿಕ್ಷಣದ ಮೂಲಕ ಕನ್ನಡದ ಅರಿವನ್ನು ಗಳಿಸಿಕೊಂಡು ಕನ್ನಡ ಸಾರಸ್ವತ ಲೋಕಕ್ಕೆ ಬಂದಿದ್ದಾರೆ. ಕರಾವಳಿಯ ದಲಿತ ಬರಹಗಾರರಿಗೆ ಅವರ ಸಾಕ್ಷರ ಸಂಸ್ಕೃತಿ, ಪರಿಸರ, ಭಾಷೆ ಸಮಸ್ಯೆಗಳಾಗಿ ಎದುರಾಗುತ್ತವೆ. ಈ ತಲ್ಲಣಗಳನ್ನು ಎದುರಿಸಿಕೊಂಡು, ದಲಿತೇತರರು ಹಾಕಿದ ಹೆಜ್ಜೆ ಗುರುತುಗಳು, ಸಮಾಜ ಸುಧಾರಕರುಗಳ ನಿರಂತರ ಪ್ರಯತ್ನ, ಸಾಮಾಜಿಕವಾಗಿ ದೂರವಿದ್ದು ಆರ್ಥಿಕವಾಗಿ ಶೋಚನೀಯವಾಗಿದ್ದ ಇಲ್ಲಿನ ದಲಿತರು ಮೊದಮೊದಲು ಶಿಕ್ಷಣದ ಬಗ್ಗೆ ಭಯ ಮತ್ತು ನಮ್ಮವರಿಗೆ ಇದು ಬೇಕೇ? ಎಂಬ ಉದಾಸೀನ ಭಾವದಿಂದ ದೂರವಿದ್ದರು. ಇದಕ್ಕೆ ಪರಿಸರ ಹಾಗೂ ಭಾಷೆ ಕಾರಣವಾಗಿದೆ. ತನ್ನದಲ್ಲದ ಭಾಷೆಯನ್ನು ಕಲಿತು, ಅಸ್ಪೃಶ್ಯನಾಗಿದ್ದ ದಲಿತನು ವಿಪ್ಲವಗಳೊಂದಿಗೆ ಸಾಕ್ಷರನಾಗುತ್ತಾನೆ.

ಸ್ವಾತಂತ್ರ್ಯೋತ್ತರ ಕಾಲಘಟ್ಟದ ನಂತರ ದಲಿತರು ನಿಧಾನವಾಗಿ ತಮ್ಮ ಮಾತೃಭಾಷೆ ಹಾಗೂ ಕನ್ನಡ ಭಾಷೆಯಲ್ಲಿ ಸಾಹಿತ್ಯದ ಕೃಷಿಯನ್ನು ಆರಂಭಿಸಿದರು. ತನ್ನ ಪ್ರಪಂಚದ ಅನುಭವಗಳನ್ನು, ದಲಿತರೊಡನೆ ಒಂದಾಗಿ ಬೆರೆತು ಅಲ್ಲಿನ ಸಾಧ್ಯತೆಗಳನ್ನು ದಾಖಲಿಸತೊಡಗಿದರು. ಕರಾವಳಿಯ ಆರಾಧನಾ ಪರಂಪರೆಯಲ್ಲಿ ತುಳು ಮೌಖಿಕ ಕವಿತೆಗಳು, ಪಾಡ್ದನಗಳು, ಉರಲ್‌ಗಳು. ಇಲ್ಲೆಲ್ಲಾ ದಲಿತರ ಕೊಡುಗೆ ಮಹತ್ತರವಾಗಿ ಕಂಡುಬರುತ್ತದೆ. ಇಲ್ಲಿ ಭಾಷೆಯು ಕರಾವಳಿಯ ದಲಿತ ಲೇಖಕರಿಗೆ ಎದುರಾಗುವ ಸವಾಲು. ದಲಿತ ಪ್ರಜ್ಞೆಯಿಂದ ದಲಿತರಿಗಾಗಿ ಆಡು ಭಾಷೆಯಲ್ಲಿ ಬರೆಯಬೇಕೋ ಅಥವಾ ಶಿಷ್ಟ ಭಾಷೆಯಲ್ಲಿ ಬರೆಯಬೇಕೋ ಎಂಬಂತಹ ಪ್ರಶ್ನೆ ಎದುರಾಗುತ್ತದೆ. ದಲಿತರೊಳಗಿದ್ದುಕೊಂಡು, ದಲಿತ ಲೇಖಕ ದಲಿತರಿಗಾಗಿಯೇ ಸಾಹಿತ್ಯವನ್ನು ಕಟ್ಟಿ ಕೊಡುವಾಗ ಅವರದೇ ಆದ ಭಾಷೆ ಬಳಸುವಾಗ ತನ್ನದೇ ಸಂಸ್ಕೃತಿಯ ವಿಚಾರವಿದು ಎಂಬಂತೆ ಆಪ್ತವಾಗುತ್ತದೆ. ದೇವನೂರರ 'ಒಡಲಾಳ', 'ಕುಸುಮಬಾಲೆ' ಶ್ರೇಷ್ಠ ಕೃತಿಗಳಾಗಿ ಕಂಡುಬರುವುದನ್ನು ಗಮನಿಸಬಹುದು.

ಕನ್ನಡ ಕಲಿಕೆಯ ಭಾಷೆಯಾಗಿರುವ ಈ ಪ್ರದೇಶದ ದಲಿತ ಸಾಹಿತ್ಯ ಗ್ರಾಂಥಿಕ ಕನ್ನಡದಲ್ಲಿ ರಚನೆಯಾಗಿರೋದು ಗಮನಿಸಬಹುದಾಗಿದೆ. ಆಡುಮಾತಿನ ಸೊಗಡು, ದಲಿತ ಬದುಕಿನ ದಟ್ಟವಾದ ಅನುಭವಗಳ ಸೂಕ್ಷ್ಮಾತಿಸೂಕ್ಷ್ಮ ಭಾವಚಿತ್ರವನ್ನು ಬಿಡಿಸುವ ಕಲೆಗಾರಿಕೆ ಇಲ್ಲಿನ ದಲಿತ ಕಥೆಗಾರರಲ್ಲಿ ಕಾಣಬಹುದಾಗಿದೆ. ಅವರು ಬಳಸುವ ದೇಸಿ

ಸೊಗಡಿನ ಪದಗಳು ಇದಕ್ಕೆ ಉದಾಹರಣೆಯಾಗಿದೆ. ಕರಾವಳಿ ಪರಿಸರದ ಆಧುನಿಕ ಸಾಹಿತ್ಯವನ್ನು ದಲಿತರ ನೆಲೆಯಲ್ಲಿ ಗಮನಿಸುವಾಗ ಅವರ ಸಮಾಜದ ಬದುಕಿನ ತಲ್ಲಣಗಳನ್ನು ಪರಿಶೀಲಿಸಬಹುದಾಗಿದೆ. ಪ್ರಾತಿನಿಧಿಕವಾಗಿ ಇಲ್ಲಿ ಕೆಲವು ಸಾಹಿತಿಗಳ ಬರಹಗಳನ್ನು ಅವಲೋಕಿಸಲಾಗಿದೆ.

'ಜನಾರ್ಧನ ಎರ್ಪಕಟ್ಟೆ' ಅವರ 'ಎರ್ಪಕಟ್ಟೆ ಕಥೆಗಳು' ಸಂಕಲನದಲ್ಲಿ ಕರಾವಳಿಯ ದಲಿತರ ಬದುಕಿನ ಸಂವೇದನೆಗಳು ಹಾಗೂ ತಲ್ಲಣಗಳು ವಿಭಿನ್ನ ನೆಲೆಗಳಲ್ಲಿ ಅನಾವರಣಗೊಳ್ಳುತ್ತದೆ. ದಲಿತ ಬದುಕಿನ ನೋವು ಅಸಹಾಯಕತೆಗಳನ್ನು ಮೇಲ್ಜಾತಿ ಮೇಲ್ವರ್ಗದ ಜನರೊಡನೆ ಮುಖಾಮುಖಿಯಾಗಿಸಿ ತಮ್ಮ ಪ್ರತಿಭಟನೆಯ ನಿಲುವನ್ನು ಸೂಕ್ಷ್ಮವಾಗಿ ಬಿತ್ತರಿಸುತ್ತಾರೆ. ಅವರ 'ಕೊರಗ' ಕಥೆ ಮತ್ತು 'ದರ್ಶನ' ಕಥೆಗಳಲ್ಲಿ ಜೀವಪರವಾದ ಕಾಳಜಿ ಅಪ್ರಾಮಾಣಿಕವಾಗಿ ಬದುಕಿನ ಬಗ್ಗೆ ಸಿಟ್ಟನ್ನು ಸಂಯಮದಿಂದ ಪ್ರಕಾಶಿಸುವ ಕಥೆಗಳ ಮನೋಧರ್ಮವಾಗಿ ಬಚ್ಚಿಡುತ್ತದೆ. 'ದರ್ಶನ' ಕಥೆಯಲ್ಲಿ ದೇವಾಲಯದ ಪ್ರವೇಶಕ್ಕೆ ಹರಿಜನರನ್ನು ಕರೆದುಕೊಂಡು ಹೋಗುವ ಸನ್ನಿವೇಶವು ಚಿತ್ರಣಗೊಂಡಿದೆ. ಭೂತ ಕಟ್ಟುವ ವೃತ್ತಿಯಿಂದ ನಿವೃತ್ತನಾದ ಬೊಗ್ಗುವಿನ ಪಾತ್ರವನ್ನು ಕೇಂದ್ರ ಪ್ರಜ್ಞೆಯಾಗಿಸಿ ಭೂತಾರಾಧನೆಯ ವ್ಯವಸ್ಥೆಯಲ್ಲಿ ಹುದುಗಿರುವ ಶೋಷಣೆಯ ಎಳೆಗಳನ್ನು ಶೋಧಿಸುವುದರೊಂದಿಗೆ ನಗರೀಕರಣದ ಭೋಗ ಸಂಸ್ಕೃತಿಯ ದಾಳಿಗೆ ವಿರೂಪಗೊಳ್ಳುವ ವಾಸ್ತವವನ್ನು 'ಆಕ್ರಮಣ' ಕಥೆಯು ನಿರೂಪಿಸುತ್ತದೆ. 'ನೀರು' ಎಂಬ ಕಥೆಯು ಮುಟ್ಟಿಸಿಕೊಳ್ಳದ ಜನಾಂಗವೊಂದರ ಕುಟುಂಬಕ್ಕೆ ತಮ್ಮದೇ ಆದ ಬಾವಿಯನ್ನು ಹೊಂದುವುದು ಎಂತಹ ಅದ್ಭುತ ಆನಂದದ ವಿಚಾರ ಎನ್ನುವುದನ್ನು ಕಥೆಯಲ್ಲಿ ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತಾರೆ.

'ಸುರೇಶ್ ಮರೀಣಾಪುರ' ಅವರ 'ಬೂಬನ ಕಥೆಗಳು' ಎಂಬ ಕಥಾಸಂಕಲನದಲ್ಲಿ ಕಾರ್ಕಳ ತಾಲೂಕಿನ ಮಣ್ಣಿನಲ್ಲಿ ನೂರಾರು ವರ್ಷಗಳಿಂದ ಜಾತಿ ವರ್ಗಗಳ ಕಾರಣಕ್ಕಾಗಿ ಶೋಷಣೆಗೆ ಒಳಗಾಗುತ್ತಿರುವ ಪಾತ್ರಗಳನ್ನು ರೂಪಿಸಿ ಚಿತ್ರಿಸಲಾಗಿದೆ. ಕರ್ಗಿ, ಕುಟ್ಟಿ, ಚಿಕ್ಕಿ, ದೊಂಬ, ಜಬ್ಬ, ಗಿಡ್ಡಿ, ಬೂಬ, ಬೊಮ್ಮಿ, ಬೋರು, ದುಗ್ಗ, ಕೂಕ್ರ, ಕೊಗ್ಗ, ತಿಮರೆ, ಅಕ್ಕಣಿ, ತುಂಬೆ, ಬೊಗ್ಗು ಮೊದಲಾದ ದಲಿತ ಪಾತ್ರಗಳಿವೆ. ಕಥೆಗಳಲ್ಲಿ ಶೋಷಣೆ, ದಲಿತ ಬದುಕಿನ ದುರಂತಗಳ ಚಿತ್ರಣವು ಪ್ರಕಟಗೊಂಡಿದೆ.

'ಸುರೇಶ್ ಮರೀಣಾಪುರ' ಅವರು ರಚಿಸಿರುವ 'ಚಿಂಬುರಿ' ಎಂಬ ಕಾದಂಬರಿಯು ಭೂ ಒಡೆಯರಾದ ದಲಿತರು ಪ್ರಬಲ ಜಾತಿಯ ವ್ಯಕ್ತಿಯಿಂದ ವಂಚನೆಗೊಳಗಾಗಿ ಭೂಮಿಯನ್ನು ಕಳೆದುಕೊಳ್ಳುವ ಕಥನವಾಗಿದೆ. ಸದಾ ಬೂದಿ ಮುಚ್ಚಿದ ಕೆಂಡದಂತೆ ನಿಗಿನಿಗಿಸುತ್ತಿದ್ದ ಅಸಹಾಯಕತೆ, ಅಸಹನೆ, ಸಿಟ್ಟು, ಸುತ್ತಲಿನ

ವ್ಯವಸ್ಥೆಯ ಕುರಿತಾದ ಆಕ್ರೋಶ, ಜಿಗುಪ್ಸೆ, ಅನುಮಾನ ಇವೆಲ್ಲವೂಗಳು ಇಲ್ಲಿ ಚಿತ್ರಿತವಾಗಿದೆ. ಅವಿಭಜಿತ ದಕ್ಷಿಣ ಕನ್ನಡದ ದಲಿತ ಕುಟುಂಬವೊಂದು ಅಸಮಾನತೆ, ಅಸ್ಪೃಶ್ಯತೆ, ಮೇಲ್ಜಾತಿಯ ಶೋಷಣೆ, ದೌರ್ಜನ್ಯಕ್ಕೆ ಒಳಗಾಗಿ ನಾಶವಾಗುವುದನ್ನು ದಲಿತ ಸಮುದಾಯದ ಸಾಂಸ್ಕೃತಿಕ ವಿವರಗಳೊಂದಿಗೆ ಕಟ್ಟಿಕೊಡುತ್ತದೆ. ಶಿವರಾಮ ಕಾರಂತರ 'ಚೋಮನ ದುಡಿ' ಕಾದಂಬರಿಯಲ್ಲಿ ಚೋಮನಿಗೆ ತುಂಡು ಭೂಮಿ ಮಾತ್ರ ಇರುತ್ತದೆ. ಆದರೆ 'ಚಿಂಬುರಿ' ಕಾದಂಬರಿಯ ಪಾತ್ರವನ್ನು ಗಮನಿಸುತ್ತಾ ಅವರ ಹಿಂದಿನ ತಲೆಮಾರು ಯಥೇಚ್ಛವಾಗಿ ಭೂಮಿಯನ್ನು ಹೊಂದಿರುತ್ತಾರೆ. ಕರಾವಳಿಯಲ್ಲಿ ದಲಿತ ಸಮುದಾಯಗಳಲ್ಲಿ ಭೂಮಿಯ ಒಡೆತನ ಇತ್ತು. ಅಲ್ಲಿನ ಮೇಲುಸ್ತರದ ಜಾತಿಗಳು ದಲಿತ ಸಮುದಾಯವನ್ನು ವಂಚಿಸಿ ಭೂರಹಿತರನ್ನಾಗಿ ಮಾಡಿದ್ದಾರೆ ಎಂಬ ನಿಲುವನ್ನು ಇಲ್ಲಿ ದಾಖಲು ಮಾಡಲಾಗಿದೆ. ಶೋಷಕನಿಂದ ಶೋಷಣೆಗೆ ಒಳಗಾಗುವ ಶೋಷಿತ ಜೀವನದುದ್ದಕ್ಕೂ ಆರ್ಥಿಕ ಏಳಿಗೆ ಹೊಂದದೆ ಜೀವಿಸುವ ರೀತಿ, ತಳಸ್ಥರದ ಒಡಲಾಳದ ನೋವು, ದಲಿತ ಸಂವೇದನೆ, ಆರ್ಥಿಕ ಹಿಂಜರಿತದಿಂದ ಸೃಷ್ಟಿಯಾಗುವ ಶಿಕ್ಷಣ ವಂಚಿತ ಕುಟುಂಬ, ಇವೆಲ್ಲ ದಲಿತರಿಗಾಗಿ ಸೃಷ್ಟಿಯಾಗಿರುವ ಅಮಾನವೀಯ ಸ್ಥಿತಿಗಳು 'ಚಿಂಬುರಿ' ಕೃತಿಯಲ್ಲಿ ಕರುಳು ಹಿಂಡುವಂತೆ ದಾಖಲಾಗಿದೆ.

ಗದ್ಯದಲ್ಲಿ ದಲಿತರ ಬದುಕಿನ ತಲ್ಲಣಗಳು ಆಧುನಿಕ ದಲಿತ ಬರಹಗಾರರಲ್ಲಿ ಕಂಡುಬಂದಂತೆ, ವಿವಿಧ ಯುವ ಬರಹಗಾರರ ಪದ್ಯಗಳಲ್ಲಿಯೂ ತಲ್ಲಣಗಳು, ಸಂವೇದನೆಗಳು ಕರಾವಳಿಯ ಸಾಹಿತ್ಯದಲ್ಲಿ ಪ್ರಕಟಗೊಂಡಿದೆ. 'ಸುಂದರ ಬಾರಡ್ಕ' ಅವರ 'ಕಪ್ಪು ಹಾದಿಯ ಕೆಂಪು ಹೆಜ್ಜೆಗಳು' ಕವನ ಸಂಕಲನದಲ್ಲಿ ದಲಿತ ಸಮಾಜದ ದಬ್ಬಾಳಿಕೆಗೆ ಸ್ಪಷ್ಟ ಉತ್ತರವನ್ನು ಕವಿಯ ಅಂತರಾಳದ ತುಡಿತಗಳನ್ನು ಕಾಣಬಹುದಾಗಿದೆ. 'ಎಂ.ಎಸ್. ಶೇಖರ್' ಅವರ 'ಒಂದು ಹೆಜ್ಜೆ ಜಾಗ ಕೊಡಿ' ಕವನ ಸಂಕಲನದ 'ಕಪ್ಪು ನೆಲ', 'ದಲಿತ', 'ಅಂಕುಶ', 'ಸಾಂತ್ವನ', 'ಬೆಳಕಿನತ್ತ ಸಾಗಿ' ಇವೇ ಮೊದಲಾದ ಕವಿತೆಗಳಲ್ಲಿ ಶೋಷಣೆ, ಅನ್ಯಾಯ ವಿಚಾರಗಳನ್ನು ಎದುರಿಸುವ ದಿಟ್ಟತನದ ಧೋರಣೆಯ ಛಾಯೆಯು ಕಂಡುಬರುತ್ತದೆ. 'ಒಂದು ಹೆಜ್ಜೆ ಜಾಗ ಕೊಡಿ' ಎಂಬ ಕವನವು ಶತಮಾನಗಳ ಶೋಷಣೆ, ಅಪಮಾನಗಳಿಂದ ನೊಂದ ಉಪೇಕ್ಷಿತ ವರ್ಗದ ವ್ಯಗ್ರ ಮನಸ್ಸುಗಳ ಮೊರೆತವಾಗಿದೆ. ಸಾಮಾಜಿಕ ಜವಾಬ್ದಾರಿಯ ಕನಸುಗಳ ತಲ್ಲಣಗಳು ಇಲ್ಲಿವೆ.

'ರಾಧಾಕೃಷ್ಣ ಉಳಿಯತ್ತಡ್ಕ' ಅವರ ಹಲವು ಕವಿತೆಗಳಲ್ಲಿ ಶೋಷಿತ, ಶ್ರಮಿಕ, ಕಾರ್ಮಿಕ ವರ್ಗದ ನೋವಿಗೆ ಧ್ವನಿ ಕೊಡುವ ಪ್ರಯತ್ನವನ್ನು ಮಾಡಲಾಗಿದೆ. 'ಅರ್ಧ ಸತ್ಯದ ಬೆಳಕು' ಸಂಕಲನದಲ್ಲಿ ನೋವಿನ ಅನುಭವದ ಕುಲುಮೆಯಲ್ಲಿ ಕುದಿದು ಆಕಾರ ಪಡೆದ ಅಶಕ್ತ ದನಿಗಳಿಗೆ ಜೀವ ತುಂಬುವ ಕವಿತೆಗಳಿವೆ. ಇವರ ಕವಿತೆಗಳಲ್ಲಿ ಶೋಷಣೆ ಹೇಗೆ ಸಮಾಜದಲ್ಲಿ ನಾನಾ ಸ್ತರಗಳಲ್ಲಿ ತನ್ನ ಕಬಂಧ ಬಾಹುಗಳನ್ನು

ಚಾಚುತ್ತದೆ; ದಲಿತನಾದವನು ಹೇಗೆ ಅದಕ್ಕೆ ಆಹಾರವಾಗುತ್ತಾನೆ ಎಂಬುದನ್ನು ಸಾಂಕೇತಿಕವಾಗಿ ಕಾವ್ಯಗಳ ಮೂಲಕ ಕಟ್ಟಿಕೊಟ್ಟಿದ್ದಾರೆ.

ಕರಾವಳಿಯ ಸೃಜನಶೀಲ ದಲಿತ ಬರಹಗಾರರಲ್ಲಿ 'ಮಸುಮ' ಎಂಬ ಕಾವ್ಯನಾಮದಿಂದ ಗುರುತಿಸಿಕೊಂಡಿರುವಂತಹ 'ಸುರೇಶ್ ಮರಿಣಾಪುರ'ರು ಪ್ರಮುಖರೆನಿಸಿದ್ದಾರೆ. 21ನೇ ಶತಮಾನದ ಆರಂಭದಲ್ಲಿ ಸುರೇಶರು ಬರವಣಿಗೆಯನ್ನು ಪ್ರಾರಂಭಿಸಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ದಲಿತ ಕಾವ್ಯಲೋಕದ ಅವಲೋಕನವನ್ನು ಮಾಡುವಾಗ ಇವರು ಎದ್ದು ಕಾಣುತ್ತಾರೆ. ಇವರ 'ತೆಂಡೆ ಹೂವು', 'ಕಬ್ಬಕ್ಕಿಯ ಕಲರವ', 'ಪಾರಿಜಾತ', 'ಮಕರಂದ', 'ಹಂಸಕ್ಷೀರ', 'ಬಿಳಿಯ ಮೊಗ್ಗು' ಕವನ ಸಂಕಲನಗಳಲ್ಲಿ ದಲಿತರ ಬದುಕಿನ ತಲ್ಲಣಗಳು ಅನುರಣಿಸುತ್ತಾ ಸಾಗುತ್ತದೆ. ಅವರ 'ತೆಂಡೆಹೂವು' ಕವನದಲ್ಲಿ ಕರಾವಳಿಯ ತೆಂಡೆ ಹೂವಿನಂತೆ ಕಾಡಿನ ಬದಿಯಲ್ಲಿ ಬದುಕುವ ದಲಿತರು ಎಲ್ಲಾ ವಿಧದ ಶೋಷಣೆ, ತಿರಸ್ಕಾರದ ನಡುವೆಯೂ ಬದುಕಿನ ಪ್ರೀತಿಯನ್ನು ಕಳೆದುಕೊಳ್ಳದೆ, ವಿಮುಖರಾಗದೆ ಬದುಕುತ್ತಿದ್ದಾರೆ, ಎಂಬ ಧ್ವನಿಯು ಇಲ್ಲಿದೆ. 'ಬೀಯಲಜ್ಜಿಯ ಹಾಡು' ಕವನದಲ್ಲಿ ಬೀಯಲಜ್ಜಿ ದಲಿತ ಸಂಸ್ಕೃತಿಯನ್ನು ಪ್ರತಿನಿಧಿಸುತ್ತಾಳೆ. 'ಕೊರಗರು' ಕವಿತೆಯು ದುಡಿಮೆಯ ಸ್ವಾಭಿಮಾನ ಬದುಕಿನ ಅರ್ಥಪೂರ್ಣತೆಯನ್ನು ಚಿತ್ರಿಸುತ್ತದೆ.

'ಕಬ್ಬಕ್ಕಿಯ ಕಲರವ' ಕವಿತೆಯಲ್ಲಿ ಸುರೇಶ್‌ರವರು ಕಬ್ಬಕ್ಕಿಯನ್ನು ದಲಿತ ಬದುಕಿನ ಪ್ರತಿಮೆಯಾಗಿ ಬಳಸಿರುವುದು ವಿಶೇಷವಾಗಿದೆ. ಹೆಸರೇ ಸೂಚಿಸುವಂತೆ, ಈ ಸಂಕಲನವು ದಲಿತ ಅನುಭವ ಲೋಕದ ಕಲರವವಾಗಿದೆ. ಬಹುವಿಧದ ಸಂಕಟದ ನೆಲೆಯಿಂದ ಹೊರಟಿರುವ ನೋವಿನ ಗೀತೆಗಳು ಇಲ್ಲಿವೆ. ಸುರೇಶ್‌ರವರ 'ಮಕರಂದ' ಕವನ ಸಂಕಲನದ 'ಅಂಬೇಡ್ಕರ್ ಅಂಬೇಡ್ಕರ್' ಕವಿತೆಯಲ್ಲಿ ಅಂಬೇಡ್ಕರ್ ಅವರ ಹೋರಾಟವನ್ನು ನೆನಪಿಸುತ್ತ, ದಲಿತರಲ್ಲಿ ಉಂಟಾಗಿರುವ ಎಡಬಲ ಒಡಕನ್ನು ಕುರಿತು ವಿಷಾದಿಸುತ್ತಾರೆ. ಶೋಷಣೆಯ ವಿವಿಧ ಮಗ್ಗಲುಗಳನ್ನು ಸುರೇಶ್ ಮರಿಣಾಪುರರು ತಮ್ಮ ಕಾವ್ಯಗಳಲ್ಲಿ ವೈವಿಧ್ಯಮಯವಾಗಿ ಅನಾವರಣಗೊಳಿಸುತ್ತಾರೆ.

ಕವಯಿತ್ರಿ ಪದ್ಮಾವತಿ ಏದಾರ್‌ರವರು ರಚಿಸಿರುವ 'ನೆಲದ ಬಿಕ್ಕಳಿಕೆ' ಕವನ ಸಂಕಲನವು ದಲಿತ ಪ್ರಜ್ಞೆಯ ನಿಲುವುಗಳನ್ನು ಮಹಿಳಾ ಧ್ವನಿಯಾಗಿ ಪದ್ಮಾವತಿಯವರು ಚಿತ್ರಿಸಿದ್ದಾರೆ. 'ನಮನ' ಕವಿತೆಯಲ್ಲಿ ದಲಿತ ಪ್ರಜ್ಞೆಯು ಜಾಗೃತವಾಗಿದೆ. ಹೆಣ್ಣು ಕೇವಲ ಪೂಜ್ಯಳಲ್ಲ, ರಕ್ತಮಾಂಸವಿರುವ ಜೀವವಾದರೂ ಆಕೆಯ ಅಂತರಂಗದ ತುಡಿತ, ನೋವಿನ ಮಿಡಿತವನ್ನು ಅರ್ಥೈಸುವ ಈ ಸಮಾಜ ಆಕೆಯನ್ನು ನೋಡುವ ದೃಷ್ಟಿಕೋನವೇ ವ್ಯತಿರಿಕ್ತ. ಇದು 'ಬದುಕಲು ಬಿಡಿ' ಕವನದ ಧ್ವನಿಯಾಗಿದೆ. ಸುಧಾರಣೆಯ ಕನಸು ಹೊತ್ತ ರಚನೆಗಳನ್ನು ಕವಯಿತ್ರಿ ಅನಾವರಣಗೊಳಿಸುತ್ತಾರೆ.

ಕರಾವಳಿಯ ಸಾಮಾಜಿಕ ಚರಿತ್ರೆಯನ್ನು ಗಮನಿಸಿದಾಗ ಇಲ್ಲಿನ ದಲಿತ ಬರವಣಿಗೆಗಳು ಕಡಿಮೆಯಾಗಿ ಗೋಚರಿಸುತ್ತದೆ. ಇಲ್ಲಿನ ಸಾಮಾಜಿಕತೆಯಲ್ಲಿ ಶೂದ್ರ ಪ್ರಶ್ನೆ, ದಲಿತ ಪ್ರಶ್ನೆ ಒಂದು ರಾಜಕೀಯ ಪ್ರಶ್ನೆಯಾಗಿ ಬೆಳೆಯದೆ ಇಲ್ಲಿ ಜಾತಿ ವ್ಯವಸ್ಥೆ ಬಹಳ ಪ್ರಬಲವಾಗಿದೆ. ಅಸ್ಪೃಶ್ಯತೆಯ ಆಚರಣೆ ಇಲ್ಲಿದೆ. ತಾರತಮ್ಯ ಇದೆ. ಆದರೂ ದೈವಾರಾಧನೆ, ಆಚರಣೆ ಸಂಬಂಧಿ ವಿಧಿವಿಧಾನಗಳು ಇಲ್ಲೆಲ್ಲಾ ಸಾಮಾಜಿಕ, ಸಾಂಸ್ಕೃತಿಕ ಸ್ವರೂಪವು ಶ್ರೇಣೀಕರಣವನ್ನು ಕಾಪಾಡುವಂತೆ ಜಾತಿಗಳ ನಡುವೆ ಒಳಗೊಳ್ಳುವಿಕೆ, ಪಾಲ್ಗೊಳ್ಳುವಿಕೆಯನ್ನು ರೂಪಿಸಿವೆ. ದಲಿತ ಚಿಂತನೆ ಪ್ರಬಲ ಧ್ವನಿಯಾಗಿ ವ್ಯಕ್ತಪಡಿಸಲು ಇಲ್ಲಿನ ಮನಸ್ಸು ಹಿಂದೇಟು ಹಾಕಿದೆ ಎನ್ನಬಹುದು. ಹಾಗಾಗಿ, ದಲಿತ ಸಾಹಿತಿಗಳು ಕೂಡಾ ದಲಿತ ಸಮಸ್ಯೆಗಳಿಗೆ ಒತ್ತು ನೀಡುವುದಕ್ಕಿಂತಲೂ, ಬದುಕಿನ ಇತರ ತಲ್ಲಣಗಳ ಕುರಿತಂತೆ ಕಾವ್ಯಾತ್ಮಕವಾಗಿ ಸೂಚ್ಯವಾಗಿ ಹೇಳಲು ತೊಡಗಿರುವುದನ್ನು ಗಮನಿಸಬಹುದಾಗಿದೆ. ಹಾಗೂ ಇಲ್ಲಿನ ಹೆಚ್ಚಿನ ದಲಿತ ಸಮುದಾಯಗಳು ಮೌಖಿಕ ಪರಂಪರೆಯನ್ನು ಹೊಂದಿರುವಂತಹವುಗಳಾಗಿವೆ. ಶಿಕ್ಷಣದ ಅವಕಾಶಕ್ಕೆ ಅದರಲ್ಲೂ ಉನ್ನತ ಶಿಕ್ಷಣಕ್ಕೆ ಈ ಸಮುದಾಯಗಳು ತೆರೆದುಕೊಂಡಿದ್ದು ನಿಧಾನವಾಗಿ. ಒಟ್ಟಿನಲ್ಲಿ ಅವರ ಪ್ರಾತಿನಿಧಿಕವಾದ ಗದ್ಯ ಹಾಗೂ ಪದ್ಯ ಸಾಹಿತ್ಯ ಕೃತಿಗಳು ಕನ್ನಡ ಸಾರಸ್ವತ ಲೋಕಕ್ಕೆ ತೆರೆದುಕೊಳ್ಳುವುದು ಹೆಚ್ಚಾಗಿ ಇಪ್ಪತ್ತೊಂದನೆಯ ಶತಮಾನದ ನಂತರದಲ್ಲಿಯೇ, ಈ ಎಲ್ಲಾ ಸಂದಿಗ್ಧತೆಗಳ ಮಧ್ಯೆಯೂ ನಂತರದಲ್ಲಿ ಬಂದಂತಹ ಯುವ ಬರಹಗಾರರು ತಮ್ಮ ಆಧುನಿಕ ಸಾಹಿತ್ಯ ರಚನೆಯಲ್ಲಿ ಹಲವಾರು ಸವಾಲುಗಳನ್ನು ಹಾಗೂ ತಲ್ಲಣಗಳನ್ನು ಎದುರಿಸಬೇಕಾಯಿತು. ಮುಖ್ಯವಾದ ಬರಹಗಾರರ ಕೃತಿಗಳ ಅಧ್ಯಯನದ ನಂತರ ಕರಾವಳಿ ಪರಿಸರದ ದಲಿತ ಸಾಹಿತ್ಯವು ಭವಿಷ್ಯದಲ್ಲಿ ಹೊಸದಾದ ಚಿಂತನೆಗಳನ್ನು ಬಿತ್ತರಿಸುತ್ತಾ ಕನ್ನಡ ಸಾಹಿತ್ಯ ಚರಿತ್ರೆಗೆ ತನ್ನದೇ ಆದಂತಹ ಕೊಡುಗೆಯನ್ನು ನೀಡಲಿದೆ ಎಂಬುವುದನ್ನು ಮನಗಾಣಬಹುದಾಗಿದೆ.

**ಅಡಿ ಟಿಪ್ಪಣಿಗಳು:**

1. ಜನಾರ್ಧನ ಎರ್ಪಕಟ್ಟೆ, (1999), ದಲಿತ ಚಿಂತನೆ, ಸ್ಮೃತಿ ಪ್ರಕಾಶನ, ಅಡ್ಯನಡ್ಕ, ದಕ್ಷಿಣ ಕನ್ನಡ, ಪು.ಸಂ. 2122

**ಪರಾಮರ್ಶನ ಗ್ರಂಥಗಳು:**


1. ಜನಾರ್ಧನ ಎರ್ಪಕಟ್ಟೆ, (1999), ದಲಿತ ಚಿಂತನೆ, ಸ್ಮೃತಿ ಪ್ರಕಾಶನ, ಅಡ್ಯನಡ್ಕ, ದಕ್ಷಿಣ ಕನ್ನಡ.
2. ಜನಾರ್ಧನ ಎರ್ಪಕಟ್ಟೆ, (2012), ಎರ್ಪಕಟ್ಟೆ ಕಥೆಗಳು, ಕೌಸ್ತುಭ ಪ್ರಕಾಶನ, ಬೆಂಗಳೂರು.
3. ಪದ್ಮಾವತಿ ಏದಾರ್, (2018), ನೆಲದ ಬಿಕ್ಕಳಿಕೆ, ಅಂಬೇಡ್ಕರ್ ವಿಚಾರ ವೇದಿಕೆ (ರಿ.) ಬದಿಯಡ್ಕ, ಕಾಸರಗೋಡು.
4. ರಮೇಶ್ ಮಂಜೇಶ್ವರ, ಸತೀಶ್ ಚಿತ್ರಾಪು (ಸಂ.), (2023), ಅವಿಭಜಿತ ದಕ್ಷಿಣ ಕನ್ನಡದ ದಲಿತ ಚಿಂತನೆ, ಆಕೃತಿ ಆಶಯ ಪಬ್ಲಿಕೇಶನ್ಸ್, ಮಂಗಳೂರು.
5. ರಾಧಾಕೃಷ್ಣ ಕೆ. ಉಳಿಯತ್ತಡ್ಕ, (2014), ಅರ್ಧಸತ್ಯದ ಬೆಳಕು, ಅಂಬೇಡ್ಕರ್ ವಿಚಾರ ವೇದಿಕೆ, ಬದಿಯಡ್ಕ, ಕಾಸರಗೋಡು.
6. ಶ್ರೀನಿವಾಸ ಗಿಳಿಯಾರು (ಸಂ.), (2022), ಕಲ್ಲಾಗದೆ ಕಾದವರು ಮಸುಮ ಸಾಹಿತ್ಯ ಸಂಕಲನ, ಆಕೃತಿ ಆಶಯ ಪಬ್ಲಿಕೇಷನ್, ಮಂಗಳೂರು.
7. ಶ್ರೀನಿವಾಸ ಗಿಳಿಯಾರು (ಸಂ.), (2022), ಹೆಜ್ಜೆ ಸದ್ದು ನಿಲ್ಲಲಿಲ್ಲ, ಆಕೃತಿ ಆಶಯ ಪಬ್ಲಿಕೇಷನ್ಸ್, ಮಂಗಳೂರು.
8. ಸುಂದರ ಬಾರಡ್ಕ, (1996), ಕಪ್ಪುಹಾದಿಯ ಕೆಂಪು ಹೆಜ್ಜೆಗಳು ಕವನಸಂಕಲನ, ಕಾಸರಗೋಡು ದರ್ಪಣ ಸಾಹಿತ್ಯ ವೇದಿಕೆ, ಕಾಸರಗೋಡು.
9. ಸುಂದರ ಬಾರಡ್ಕ (ಸಂ.), (2012), ಒಂದು ಹೆಜ್ಜೆ ಜಾಗ ಕೊಡಿ, ಡಿ.ಎಸ್. ಶೇಖರ್ ಕವಿತೆಗಳು, ಅಂಬೇಡ್ಕರ್ ವಿಚಾರ ವೇದಿಕೆ (ರಿ.) ಬದಿಯಡ್ಕ, ಕಾಸರಗೋಡು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.